'ಎಲ್ಲಿ?'

'ನೋಡು, ಆ ಕೋಣೆಯಲ್ಲಿ' ಪೂರ್ವ ದಿಕ್ಕಿನಲ್ಲಿರುವ ಕೊಣೆಯತ್ತ ಬೊಟ್ಟು ಮಾಡಿ ತೋರಿದರು.

'ಯಾರಮ್ಮ?'

'ನನಗೇನು ಗೊತ್ತು?' ಆ ಮಹಿಳೆ ನಕ್ಕರು: 'ಏನೋ ಭಾರ್ಗವಿ ಎಂದು ತೋರುತ್ತದೆ; ಹೋಗಿ ಕಂಡು ಬಾ. ನಾನು ನಿನ್ನಲ್ಲಿ ಅಗತ್ಯವಾದ ವಿಷಯವೊಂದನ್ನು ಹೇಳುವುದಕ್ಕಿದೆ.'

'ಭಾರ್ಗವಿ!' ಆತ ಸ್ತಬ್ಧನಾದ. ಬಿರುಗಾಳಿಯಂತೆ ಮರುಕ್ಷಣದಲ್ಲಿಯೇ ಬಾಗಿಲು ದೂಡಿ ಜಗದೀಶ ಕೋಣೆ ಸೇರಿದ.

'ಭಾರ್ಗವಿ?' ಆತ ಪ್ರೀತಿಯಿಂದ ಕರೆದ. ಅವಳು ಮೇಜಿನ ಮೇಲೆ ಮುಖವಿಟ್ಟು ಕೆಳಗೆ ನೋಡುತ್ತಿದ್ದಳು. ಆತ ಆ ಮುಖವನ್ನು ಎರಡು ಕೈಗಳಲ್ಲಿ ಹಿಡಿದೆತ್ತಿದ. ಕಣ್ಣೀರು ತುಂಬಿದ ನಾಲ್ಕು ನಯನಗಳು ಪರಸ್ಪರ ನೋಡಿದವು.

ಅವಳು ಜಗದೀಶನ ತಲೆಯ ಒಣಗಿದ ಗಾಯದ ಕಲೆಯನ್ನು ಸವರುತ್ತ ಬಿಕ್ಕಿ ಬಿಕ್ಕಿ ಅತ್ತಳು.

'ಭಾರ್ಗವೀ!'

'ಹೂಂ!'

'ಅಪ್ಪ ಕ್ಷೇಮವಾಗಿದ್ದಾರಾ!'

'ಹಾಗೆಂತ ತೋರ್ತದೆ.'

'ಸರಿಯಾಗಿ ಗೊತ್ತಿಲ್ಲವೇನು?'

'ಇಲ್ಲ.'

'ಅದ್ಯಾಕೆ?'

